ಹೋಗುತ್ತಾರೆ; ಈ ಅಧಿಕಾರಿಗಳು ಮಾತ್ರ ನಿವೃತ್ತಿಯ ತನಕ ಇದ್ದೇ ಇರುತ್ತಾರೆ. ಅವರನ್ನು ಗದರಿಸಿ ಎದುರು ಹಾಕಿಕೊಂಡು, ಯಾವ ಮಂತ್ರಿಯೂ ಕೆಲಸ ಮಾಡಲಾರ! ನಿಜವಾಗಿ ಸರ್ಕಾರವನ್ನು ನಡೆಸುವುದು ಈ ಅಧಿಕಾರಿಗಳೆ. ಈ ಅಧಿಕಾರಿಗಳು ಸಾಂಸ್ಕೃತಿಕ ಬೇರುಗಳಿಲ್ಲದ ಕಾನ್ವೆಂಟ್ ಶಿಕ್ಷಣ ಪಡೆದು, ಗಿಳಿ ಪಾಠದ ಬುದ್ಧಿವಂತಿಕೆಯಿಂದ ಐ.ಎ.ಎಸ್. ಪದವಿಗಳನ್ನು ಪಡೆದು ಸರ್ವಜ್ಞರಾದವರು; ಪೊಳ್ಳು ಪ್ರತಿಷ್ಠೆಗಳನ್ನು ಬೆಳೆಸಿಕೊಂಡವರು. ಪಟ್ಟಭದ್ರ ಹಿತಗಳನ್ನು ರಕ್ಷಿಸಿಕೊಳ್ಳುವುದರಲ್ಲಿಯೇ ಅವರ ಆಸಕ್ತಿ. ಸರ್ಕಾರದ ವ್ಯವಹಾರಗಳು ಜನರಿಗೆ ತಿಳಿಯದಂತೆ ನಡೆದಷ್ಟೂ ಅವರಿಗೆ ಕಷ್ಟಗಳು ಕಡಮೆ. ಅವರಿಗೆ ಬರುವ ಇಂಗ್ಲೀಷಿನಲ್ಲಿ ಆಡಳಿತವನ್ನು ಯಾಂತ್ರಿಕವಾಗಿ ನಡೆಸಬಹುದು; ಜನರ ಭಾಷೆಗೆ ಬಂದರೆ ಆಡಳಿತ ಅನಿವಾರ್ಯವಾಗಿ ಸೃಜನಶೀಲವಾಗಬೇಕಾಗುತ್ತದೆ. ಕೆಂಪುಪಟ್ಟಿಯ ಈ ಸತ್ತ ಮರಗಳು ಕ್ರಿಯಾತ್ಮಕತೆಗೆ ಸ್ಪಂದಿಸುವುದು ಸಾಧ್ಯ ಇಲ್ಲ. ಅದರಿಂದಾಗಿ ಯಥಾಸ್ಥಿತಿ ಅನಿವಾರ್ಯವಾಗಿ ಮುಂದುವರಿಯುತ್ತದೆ. ಕರ್ನಾಟಕದಲ್ಲಿ ಬೇರೆ ಭಾಷೆಗಳ ಅಧಿಕಾರಿಗಳು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರಿಗೆ ಕನ್ನಡದ ಬಗೆಗೆ ಅಭಿಮಾನ ಇರುವುದು ಅಪರೂಪ; ಸಣ್ಣ ಸಂಖ್ಯೆಯ ಕನ್ನಡ ಅಧಿಕಾರಿಗಳಿಗೆ ಇದರ ಬಗ್ಗೆ ನಿರ್ಲಕ್ಷ್ಯ. ಮಂತ್ರಿ ಮಹೋದಯರಿಗೆ ತಮ್ಮ ಸಣ್ಣಪುಟ್ಟ ಅಪೇಕ್ಷೆಗಳನ್ನು ಈಡೇರಿಸಿ ಕೊಳ್ಳುವುದರಲ್ಲಿ ಇರುವ ಆಸಕ್ತಿ, ಆಡಳಿತದಲ್ಲಿ ಕನ್ನಡ ತರುವಂಥ ವಿಷಯದ ಬಗ್ಗೆ ಇರುವುದಿಲ್ಲ. ಈ ಪರಿಸ್ಥಿತಿಯನ್ನು ಅಧಿಕಾರಿಗಳು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಫಲವಾಗಿ ಕನ್ನಡ ಆಡಳಿತದಿಂದ ದೂರವಾಗಿಯೇ ಇದೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡವನ್ನು ಆಡಳಿತದಲ್ಲಿ ಅನುಷ್ಠಾನಗೊಳಿಸುವ ದೃಷ್ಟಿಯಿಂದಲೇ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವೊಂದನ್ನು ಸ್ಥಾಪಿಸಿದೆ. ಅದರ ಪ್ರಗತಿ ಹೇಳಿಕೊಳ್ಳುವಂಥದೇನೂ ಅಲ್ಲ. ಆ ಇಲಾಖೆಗೆ ಕನ್ನಡದ ವಿಷಯದಲ್ಲಿ ಆಸಕ್ತಿ ತಳೆದು ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡಬಲ್ಲಂಥ ಅಧಿಕಾರಿಗಳನ್ನು ಸರ್ಕಾರ ನೇಮಿಸುವುದಿಲ್ಲ; ನೇಮಿಸಿದ ಅಧಿಕಾರಿಗಳನ್ನೂ ನಾಲ್ಕು ನಾಲ್ಕು ದಿನಕ್ಕೆ ಬದಲಾಯಿಸಲಾಗುತ್ತದೆ. ಇದರಿಂದ ಆ ಇಲಾಖೆ ಪರಿಣಾಮಕಾರಿಯಾಗಿ ಕೆಲಸ ಮಾಡುವುದು ಸಾಧ್ಯವಾಗುತ್ತಿಲ್ಲ. ಆ ಇಲಾಖೆಗೆ ವಿಶೇಷ ಅಧಿಕಾರಗಳನ್ನು ನೀಡಿ, ಆಡಳಿತದ ಎಲ್ಲ ಹಂತಗಳಲ್ಲಿಯೂ ಕನ್ನಡ ಬಳಕೆಯ ಉಸ್ತುವಾರಿ ನೋಡಿಕೊಳ್ಳುವ ಜವಾಬ್ದಾರಿಯನ್ನು ವಹಿಸುವುದು ಅಗತ್ಯವಾಗಿತ್ತು. ಹಾವು ಸಾಯಬಾರದು; ಕೋಲು ಮುರಿಯಬಾರದು ಎಂಬುದು ಸರ್ಕಾರದ ಧೋರಣೆಯಾಗಿರುವುದರಿಂದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಿಂದ ಉದ್ದೇಶಿತ ಪರಿಣಾಮಗಳು ಸಾಧಿತವಾಗಿಲ್ಲ. ವಾಸ್ತವವಾಗಿ ಈ ಇಲಾಖೆ ಸರ್ಕಾರಿ ಆಡಳಿತದ ಹೃದಯಸ್ವರೂಪ ಆಗಿರಬೇಕು.

ಮುಖ್ಯಮಂತ್ರಿಯಾದವರು—ಮಂತ್ರಿ ಮಂಡಳ ಎಂದೂ ಹೇಳಲಾರೆ—ಸ್ವಲ್ಪ ಮಟ್ಟಿನ ನಿಜವಾದ ಆಸಕ್ತಿ ವಹಿಸಿದರೂ ಸಾಕು. ಕನ್ನಡ ಸಿಂಹಾಸನ ಏರುತ್ತದೆ! ಮೊದಲು ಕಚೇರಿಗಳಿಂದ ಇಂಗ್ಲಿಷ್ ಬೆರಳಚ್ಚು ಯಂತ್ರಗಳನ್ನು ತೆಗೆಸಿ ಹಾಕುವ ಕೆಲಸ ಆಗಬೇಕು. ಇಂಗ್ಲಿಷ್ ಬೆರಳಚ್ಚುಗಾರರಿಗೆ ತರಬೇತಿ ಕಡ್ಡಾಯ ಮಾಡಬೇಕು. ಇಷ್ಟರಿಂದಲೇ ಆಡಳಿತದಲ್ಲಿ ಕನ್ನಡ ಮುಕ್ಕಾಲು ಪಾಲು ನೆಲೆಯೂರುತ್ತದೆ. ಇದನ್ನು ಮಾಡಬಲ್ಲ ಧೀರನೊಬ್ಬ ಇಂದು ಬೇಕಾಗಿದೆ. ಮುಖ್ಯಮಂತ್ರಿ ಆದವರು ಆಸಕ್ತಿವಹಿಸಿ ಮಾಡಬೇಕೆಂದು ಮತ್ತೊಂದು ಕೆಲಸ ರಾಜ್ಯದ ಸಾರ್ವಜನಿಕ ಸೇವಾ